**ಅಂತರರಾಷ್ಟ್ರೀಯ ಕ್ರೆಡಿಟ್ ಕಾರ್ಡುಗಳು–ನಿವಾಸಿಗಳಿಗೆ ಸೌಲಭ್ಯಗಳ ಉದಾರೀಕರಣ**
**ಎ.ಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ 103 (ಮೇ 21, 2003)**
**ಭಾರತೀಯ ರಿಸರ್ವ್ ಬ್ಯಾಂಕು**
**ವಿದೇಶೀ ವಿನಿಮಯ ನಿಯಂತ್ರಣ ಇಲಾಖೆ**
**ಕೇಂದ್ರ ಕಚೇರಿ,**
**ಮುಂಬೈ–400001**

ಎ.ಪಿ (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ 103 ಮೇ 21,2003

ಗೆ,

ವಿದೇಶೀ ವಿನಿಮಯ ವ್ಯವಹಾರದಲ್ಲಿ ತೊಡಗಿರುವ ಎಲ್ಲ ಅಧಿಕೃತ ವ್ಯಾಪಾರಿಗಳು,

ಮಾನ್ಯರೇ,

**ಅಂತರರಾಷ್ಟ್ರೀಯ ಕ್ರೆಡಿಟ್ ಕಾರ್ಡುಗಳು–ನಿವಾಸಿಗಳಿಗೆ ಸೌಲಭ್ಯಗಳ ಉದಾರೀಕರಣ**

ಅಂತರರಾಷ್ಟ್ರೀಯ ಕ್ರೆಡಿಟ್‌ಕಾರ್ಡ್‌ಗಳನ್ನು ಬಳಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ ಜನವರಿ 24, 2003ರ ಎ.ಪಿ (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ 73 ರ ಕಡೆಗೆ ಅಧಿಕೃತ ವ್ಯಾಪಾರಿಗಳ ಗಮನವನ್ನು ಸೆಳೆಯಲಾಗಿದೆ.

2. ಮತ್ತಷ್ಟು ಉದಾರೀಕರಣದ ಪ್ರಯತ್ನವಾಗಿ, ಚಾಲ್ತಿ ವಿದೇಶೀ ವಿನಿಮಯ ನಿಯಂತ್ರಣಗಳ ಅಡಿಯಲ್ಲಿ ಅನುಮತಿಸಿದಂತೆ ಭಾರತದಲ್ಲಿ ಒಬ್ಬ ಅಧಿಕೃತ ವ್ಯಾಪಾರಿಯ ಬಳಿ ಅಥವಾ ವಿದೇಶದಲ್ಲಿನ ಬ್ಯಾಂಕ್‌ನಲ್ಲಿ ವಿದೇಶೀ ಕರೆನ್ಸಿ ಖಾತೆಯನ್ನು ನಿರ್ವಹಿಸುತ್ತಿರುವಂಥ ನಿವಾಸಿ ವ್ಯಕ್ತಿಗಳು ವಿದೇಶೀ ಬ್ಯಾಂಕುಗಳು ಮತ್ತು ಇತರ ಖ್ಯಾತ ಏಜೆನ್ಸಿಗಳು ನೀಡಿದ ಅಂತರರಾಷ್ಟ್ರೀಯ ಕ್ರೆಡಿಟ್‌ಕಾರ್ಡ್‌ಗಳನ್ನು ಪಡೆಯುವ ಸ್ವಾತಂತ್ರ್ಯ ಹೊಂದಿದ್ದಾರೆ. ಭಾರತದಲ್ಲಿ ಅಥವಾ ವಿದೇಶದಲ್ಲಿ ಕಾರ್ಡ್ ಮೇಲೆ ಮಾಡಿದ ವೆಚ್ಚಗಳನ್ನು ಕಾರ್ಡ್‌ದಾರನ ಅಂಥ ವಿದೇಶೀ ಕರೆನ್ಸಿ ಖಾತೆಯಲ್ಲಿ/ಗಳಲ್ಲಿ ಹೊಂದಿರುವ ನಿಧಿಗಳಿಂದ ಅಥವಾ ಕಾರ್ಡ್‌ದಾರನು ಚಾಲ್ತಿ ಅಥವಾ ಉಳಿತಾಯ ಖಾತೆಯನ್ನು ಹೊಂದಿರುವಂಥ ಬ್ಯಾಂಕ್ ಮೂಲಕ ಮಾತ್ರ ಭಾರತದಿಂದ ಹಣ ರವಾನೆಗಳು ಯಾವುವಾದರೂ ಇದ್ದರೆ ಅವುಗಳ ಮೂಲಕ ಭರಿಸಬಹುದು. ಈ ಉದ್ದೇಶಕ್ಕಾಗಿ ಹಣ ಕಳುಹಿಸುವಾಗ, ನೇರವಾಗಿ ಕಾರ್ಡು ನೀಡಿದ ವಿದೇಶಿ ಏಜನ್ಸಿಗೇ ಕಳುಹಿಸಬೇಕೇ ಹೊರತು ಮೂರನೇ ವ್ಯಕ್ತಿಗಲ್ಲ.

3. ಅನ್ವಯಿಸುವ ಸಾಲದ ಮಿತಿಯು ಕಾರ್ಡ್ ನೀಡುವ ಬ್ಯಾಂಕುಗಳು ನಿಗದಿಪಡಿಸಿದ ಮಿತಿಯಾಗಿರುತ್ತದೆ ಎಂದು, ಈ ಸೌಲಭ್ಯದ ಅಡಿಯಲ್ಲಿ ಹಣ ರವಾನೆಗಳು ಯಾವುದಾದರೂ

ಇದ್ದರೆ ಅವುಗಳಿಗೆ ಸಂಬಂಧಿಸಿದಂತೆ ಆರ್‌ಬಿಐ ಯಾವುದೇ ಹಣಕಾಸು ಮಿತಿಯನ್ನು ನಿಗದಿಪಡಿಸಿಲ್ಲವೆಂದು ಸಹ ಸ್ಪಷ್ಟಪಡಿಸಲಾಗಿದೆ.

4. ನಿವಾಸಿಗಳು ಐಸಿಸಿ ಗಳನ್ನು ಬಳಸುವುದಕ್ಕೆ ಪ್ರಸ್ತುತ ಅನ್ವಯಿಸುವಂತಹವೇ ನಿರ್ಬಂಧಗಳು, ಲಾಟರಿ ಟಿಕೆಟ್ಟುಗಳು, ನಿಷೇದಿತ ಅಥವಾ ಗೊತ್ತುಪಡಿಸಿದ ಮ್ಯಾಗಝಿನ್‌ಗಳಂತಹ ನಿರ್ಬಂಧಿತ ಬಾಬುಗಳನ್ನು ಖರೀದಿ ಮಾಡುವುದಕ್ಕೆ, ಬಾಜಿಗಳಲ್ಲಿ ಭಾಗವಹಿಸುವುದಕ್ಕೆ, ಕಾಲ್ ಬ್ಯಾಕ್ ಸೇವೆಗಳಿಗೆ ಹಣ ಸಂದಾಯ ಮಾಡುವುದೇ ಮುಂತಾದವುಗಳಿಗೆ ಅನ್ವಯವಾಗುತ್ತವೆ.

5. ಅಧಿಕೃತ ವ್ಯಾಪಾರಿಗಳು ಈ ಸುತ್ತೋಲೆಯಲ್ಲಿನ ಅಂಶಗಳನ್ನು ತಮ್ಮ ಸಂಬಂಧಪಟ್ಟ ಘಟಕಗಳ ಗಮನಕ್ಕೆ ತರತಕ್ಕದ್ದು.

6. ಈ ಸುತ್ತೋಲೆಯಲ್ಲಿ ಒಳಗೊಂಡಿರುವ ನಿರ್ದೇಶನಗಳನ್ನು ವಿದೇಶೀ ವಿನಿಮಯ ನಿರ್ವಹಣೆ ಕಾಯ್ದೆ, 1999 (1999ರ 42) ರ ಪ್ರಕರಣ 10(4) ಮತ್ತು ಪ್ರಕರಣ 11(1) ರ ಅಡಿಯಲ್ಲಿ ನೀಡಲಾಗಿದೆ.

ತಮ್ಮ ವಿಶ್ವಾಸಿ,
**ಗ್ರೇಸ್ ಕೋಶಿ**

ಮುಖ್ಯ ಪ್ರಧಾನ ವ್ಯವಸ್ಥಾಪಕರು.